**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಸಿ.ಸಿ. ನಂ. 35/2018**

**ಚಾ.ಸಾಃ 6, ಫ್ರಾ.ಸಾಃ 4**

| | |
|---|---|
| ಸಾಕ್ಷಿದಾರನ ಹೆಸರು | ನಾರಾಯಣ ಹೆಗಡೆ |
| ತಂದೆಯ ಹೆಸರು | ಶಂಭು ಹೆಗಡೆ |
| ವಯಸ್ಸು | 65 ವರ್ಷ |
| ಉದ್ಯೋಗ | ನಿವೃತ್ತ ಸೊಸೈಟಿ ಕಾರ್ಯದರ್ಶಿ |
| ವಾಸ | ಸಾಲ್ಕೋಡ |

**ಸಾಕ್ಷಿಯನ್ನು ದಿನಾಂಕಃ 17-01-2026 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ನಾನು 2005 ರಿಂದ 2016 ರ ವರೆಗೆ ಕರಿಕಾನ ಪರಮೇಶ್ವರಿ ಸಹಕಾರ ಸಂಘದ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಆ ಅವಧಿಯಲ್ಲಿ 1 ನೇ ಆರೋಪಿ ಸಂಘದ ನಿರ್ದೇಶಕರಾಗಿದ್ದರು, 2 ನೇ ಆರೋಪಿ ಸದರಿ ಸಂಘದಲ್ಲಿ ಕರಾರಿನ ಮೇರೆಗೆ ತಾತ್ಕಾಲಿಕ ಗುಮಾಸ್ತರಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು.

2016 ನೇ ಇಸವಿಯಲ್ಲಿ ಸ್ಪ್ಟಂಬರ್ ತಿಂಗಳಲ್ಲಿ ಒಂದು ದಿನ ನಾನು ಹೊನ್ನಾವರಕ್ಕೆ ಕೆಲಸದ ನಿಮಿತ್ತ ಬರಬೇಕಾದ್ದರಿಂದ ಸಂಘದ ತುರ್ತು ಕಾರ್ಯಗಳಿಗೆ ಸಹಾಯ ಆಗುವಂತೆ 4 ಚಕ್ಕುಗಳಿಗೆ ನಾನು ಸಹಿ ಮಾಡಿ ಸದರಿ ಚಕ್ಕುಗಳನ್ನು 2 ನೇ ಆರೋಪಿಯ ಕೈಗೆ ಕೊಟ್ಟು ನಾನು ಹೊನ್ನಾವರಕ್ಕೆ ಬಂದಿದ್ದೆ. ಸುಮಾರು ಒಂದು ವಾರಗಳ ಕಾಲ ಸಂಘವು ಸರಕಾರಿ ರಜೆಯಲ್ಲಿದ್ದರಿಂದ ತೆರೆದಿರಲಿಲ್ಲ. ತದನಂತರದಲ್ಲಿ 2 ನೇ ಆರೋಪಿ ಕೇವಲ 3 ಚಕ್ಕುಗಳನ್ನು ಹಿಂದಿರುಗಿಸಿದರು. ಇನ್ನೊಂದು ಚಕ್ಕನ್ನು ಕಚೇರಿಯಲ್ಲಿ ಎಲ್ಲೋ ಇಡಲಾಗಿದ್ದು ಹುಡುಕಿ ಕೊಡುತ್ತೇನೆ ಎಂದು ಹೇಳಿದ್ದರು. ಒಂದು ವಾರದ ನಂತರ ಪಾಸಪುಸ್ತಕ ಎಂಟ್ರಿ ಮಾಡಲು ಕಳುಹಿಸಿದಾಗ ಬ್ಯಾಂಕಿನಲ್ಲಿ ಸಿಸ್ಟಮ್ ಸರಿ ಇಲ್ಲದ ಕಾರಣ ಎಂಟ್ರಿ ಮಾಡಿಸಲಾಗಲಿಲ್ಲ. ತದ ನಂತರದಲ್ಲಿ ಬ್ಯಾಂಕ್ ಪಾಸ ಪುಸ್ತಕ ಎಂಟ್ರಿ ಮಾಡಿಸಿ ನೋಡಿದಾಗ ಸುಮಾರು 12 ಲಕ್ಷ ರೂಪಾಯಿ ಹಣ 1 ನೇ ಆರೋಪಿ ಹೆಸರಿಗೆ ಜಮಾ ಆಗಿರುವುದು ಕಂಡುಬಂದಿರುತ್ತದೆ. ತಕ್ಷಣ ನಾನು ಸಹಕಾರಿ ಅಭಿವೃದ್ಧಿ ಅಧಿಕಾರಿಗಳಿಗೆ ಲಿಖಿತವಾಗಿ ಈ ವಿಚಾರವನ್ನು ತಿಳಿಸಿರುತ್ತೇನೆ. ತಕ್ಷಣವೇ ಸಂಘದ ಕಚೇರಿಯ ಸಿಸಿಟಿವಿ ಫುಟೇಜನ್ನು ಒಂದು ಸಿಡಿಗೆ ಹಾಕಿ ಅದನ್ನು ಸಂಘದ ಸ್ಟ್ರಾಂಗ ರೂಮಿನಲ್ಲಿ ಇರಿಸಿದ್ದೇನೆ.

ತದನಂತರ ಅಧ್ಯಕ್ಷರು ನನ್ನನ್ನು ಒಂದು ಪ್ರಕರಣದಲ್ಲಿ ಬಂಧಿಸುವಂತೆ ಮಾಡಿದರು. ಆ ನಂತರ ಸಿಡಿ ಏನಾಗಿದೆಯೋ ಗೊತ್ತಿಲ್ಲ.

ಮುಂದುವರಿದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**